KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**



| ಭಾಗ – IV-A | ಬೆಂಗಳೂರು, ಬುಧವಾರ, ಮಾರ್ಚ್ ೩೦, ೨೦೧೧ (ಚೈತ್ರ ೯, ಶಕ ವರ್ಷ ೧೯೩೨) | ನಂ. ೩೮೦ |
|---|---|---|



**ಶಿಕ್ಷಣ ಸಚಿವಾಲಯ**

**ಅಧಿಸೂಚನೆ**

**ಸಂ. ಇಡಿ 37 ಇಟಿಆರ್ 2009, ಬೆಂಗಳೂರು, ದಿನಾಂಕ: 30ನೇ ಮಾರ್ಚ್, 2011**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ (ಕರ್ನಾಟಕ ಅಧಿನಿಯಮ ಸಂಖ್ಯೆ 29) ರ 13ನೇ ಪ್ರಕರಣದ (1) ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಮತ್ತಷ್ಟು ತಿದ್ದುಪಡಿ ಮಾಡಲು ಉದ್ದೇಶಿಸಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರ ಕರಡನ್ನು ಇದರಿಂದ ಬಾಧಿತರಾಗಬಹುದಾದಂತಹ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸದರಿ ಅಧಿನಿಯಮದ 13 ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಈ ಮೂಲಕ ಪ್ರಕಟಿಸಿ, ಇದು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿವಸಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯವಾಗುವ ಮುಂಚೆ ಸದರಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಶೀಲನೆಗಾಗಿ ಪರಿಗಣಿಸುವುದು. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001 ಈ ವಿಳಾಸಕ್ಕೆ ಕಳುಹಿಸಬಹುದು.

**ಕರಡು ನಿಯಮಗಳು**

1. **ಹೆಸರು ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮಗಳು, 2011 ಎಂದು ಕರೆಯತಕ್ಕದು.

(2) ಈ ನಿಯಮಗಳು ಅಧಿಕೃತ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **3ನೇ ನಿಯಮದ ತಿದ್ದುಪಡಿ:**– ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2007 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ರ 3ನೇ ನಿಯಮದಲ್ಲಿನ ಕೋಷ್ಠಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ

**ಕೋಷ್ಟಕ**

| ಕ್ರಮ ಸಂಖ್ಯೆ (1) | ಶಾಲೆ (2) | ಸಕ್ಷಮ ಪ್ರಾಧಿಕಾರಿಗಳು (3) |
|---|---|---|
| (i) | **ಪ್ರಾಥಮಿಕ ಶಾಲೆಗಳು** | ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು (ಆಡಳಿತ) |
| (ii) | **ಪ್ರೌಢ ಶಾಲೆಗಳು:–**<br>(ಎ) ಪ್ರೌಢಶಾಲಾ ಶಿಕ್ಷಕರಿಗಾಗಿ | (ಎ) **ಬೆಂಗಳೂರು ವಿಭಾಗ:–** ಸಹ ನಿರ್ದೇಶಕರು–1, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು<br>**(ಬಿ) ಮೈಸೂರು ವಿಭಾಗ:–** ಕಾರ್ಯದರ್ಶಿ ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು<br>(ಸಿ) **ಬೆಳಗಾಂ ವಿಭಾಗ:–** ಸಹ ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ<br>**(ಡಿ) ಗುಲ್ಬರ್ಗಾ ವಿಭಾಗ:–** ಸಹ ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ. |
| | (ಬಿ) ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಮಾನ ವೃಂದದವರು<br>(ಸಿ) ದೈಹಿಕ ಶಿಕ್ಷಣ ಪರಿವೀಕ್ಷಕರು<br>(ಡಿ) ವೃತ್ತಿ ಶಿಕ್ಷಣ ಪರಿವೀಕ್ಷಕರು | 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು<br>2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ<br>3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ |
| (iii) | ಪದವಿ ಪೂರ್ವ ಕಾಲೇಜು | ಆಯುಕ್ತರು ಅಥವಾ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ |

**3. 4ನೇ ನಿಯಮಕ್ಕೆ ತಿದ್ದುಪಡಿ:–** ಸದರಿ ನಿಯಮಗಳ 4ನೇ ನಿಯಮದ (1) ನೇ ಉಪ ನಿಯಮದಲ್ಲಿನ (iii) ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು.

**4. 6ನೇ ನಿಯಮದ ತಿದ್ದುಪಡಿ:–** ಸದರಿ ನಿಯಮಗಳ 6ನೇ ನಿಯಮದಲ್ಲಿ, (2) ನೇ ಉಪ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು; ಎಂದರೆ :–

"(2) ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವೃಂದಕ್ಕೆ ಸೇರಿದ ಶಿಕ್ಷಕರು ಹಾಗೂ ಅಧಿಕಾರಿಗಳು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರು ಆನ್–ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ಸಂದರ್ಭಾನುಸಾರ ಸಾರ್ವಜನಿಕ ಶಿಕ್ಷಣ ಇಲಾಖೆ ಅಥವಾ ಪದವಿ ಪೂರ್ವ ಶಿಕ್ಷಣ ಇಲಾಖೆಯು ಗೊತ್ತುಪಡಿಸಿದ ವೆಬ್‌ಸೈಟ್ ಮೂಲಕ ಸಲ್ಲಿಸತಕ್ಕದ್ದು"

(ii) (4) ನೇ ಉಪಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ;–

"(5) 15 ನೇ ನಿಯಮದಡಿಯಲ್ಲಿ ಬಿಡುಗಡೆಯಾದಂಥ ಅರ್ಜಿದಾರರು, ಮುಂದಿನ ಮೂರು ವರ್ಷಗಳ ಅವಧಿಯವರೆಗೆ ವರ್ಗಾವಣೆಗೆ ಸಂಬಂಧಿಸಿದಂತೆ 11 ನೇ ನಿಯಮದಡಿಯಲ್ಲಿ ಕೌನ್ಸಿಲಿಂಗ್‌ಗೆ ಅರ್ಹರಾಗಿರತಕ್ಕದ್ದಲ್ಲ."

**5. 7ನೇ ನಿಯಮದ ತಿದ್ದುಪಡಿ:– ಸದರಿ ನಿಯಮಗಳ 7ನೇ ನಿಯಮದಲ್ಲಿ;–**

(i) ಉಪ ನಿಯಮ (1) ರ ಖಂಡ (ಸಿ) ಯ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು ಎಂದರೆ:–

"(ಸಿಸಿ) ಭಾರತೀಯ ರಕ್ಷಣಾ ಪಡೆ/ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಕಾರ್ಯನಿರ್ವಹಿಸುತ್ತಿರುವ/ಮೃತರಾಗಿರುವ/ನಿವೃತ್ತರಾಗಿರುವ/ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿ

**ವಿನಾಯಿತಿ:** ಈ ಖಂಡದ ಉದ್ದೇಶಕ್ಕಾಗಿ ಯಾವ ಅರ್ಜಿದಾರರ ಪರಿವೀಕ್ಷಣಾ ಅವಧಿಯು ತೃಪ್ತಿಕರವಾಗಿ ಘೋಷಿಸಲ್ಪಟ್ಟಿರುವುದಿಲ್ಲವೋ ಅವರು ಈ ಪರಿಗಣನೆಗೆ ಅರ್ಹರಾಗಿರುವುದಿಲ್ಲ."

**(ii) (2) ನೇ ಉಪನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-**

**"(2)** ಮೇಲಿನ ಪ್ರತಿಯೊಂದು ಆದ್ಯತಾ ಪ್ರವರ್ಗಗಳೊಳಗೆ ವೆಯಿಟೆಡ್ ಸೇವೆಯನ್ನು ಗೊತ್ತುಪಡಿಸಿಕೊಳ್ಳುವ ಸಲುವಾಗಿ ಆದ್ಯತಾ ಪಟ್ಟಿಯನ್ನು ಸರ್ಕಾರವು ಅಧಿಸೂಚಿಸಿದ ಎ, ಬಿ ಮತ್ತು ಸಿ ವಲಯಗಳೆಂದು ವರ್ಗೀಕರಿಸಲಾದ ಎಲ್ಲಾ ಸ್ಥಳಗಳಲ್ಲಿ ಆಯಾ ವೃಂದಗಳಲ್ಲಿ ಅರ್ಜಿದಾರನು ಸಲ್ಲಿಸಿರುವ ಸೇವಾ ವರ್ಷಗಳ ಸಂಖ್ಯೆಯನ್ನು ಕೆಳಗೆ ನಿರ್ದಿಷ್ಟಪಡಿಸಲಾದಂತೆ ಸಂಬಂಧಪಟ್ಟ ಆಯಾ ವಲಯಗಳಿಗೆ ಹಂಚಿಕೆ ಮಾಡಲಾದ ವೆಯಿಟೇಜ್ ಅನುಪಾತದಿಂದ ಗುಣಿಸುವುದರ ಮೂಲಕ ಸಿದ್ಧಪಡಿಸತಕ್ಕದ್ದು.

(ಎ) 'ಎ' ವಲಯಗಳಲ್ಲಿನ ಶಾಲೆಗಳಿಗೆ ಸೇವಾ ವೆಯಿಟೇಜ್‌ನ್ನು 1.00 ಪಾಯಿಂಟ್‌ನೊಂದಿಗೆ ಆ ವಲಯದಲ್ಲಿ ಸಲ್ಲಿಸಲಾದ/ ಪೂರ್ಣಗೊಳಿಸಿದ ಸೇವಾ ವರ್ಷಗಳ ಸಂಖ್ಯೆಯನ್ನು ಗುಣಿಸುವುದರ ಮೂಲಕ ಲೆಕ್ಕಹಾಕತಕ್ಕದ್ದು.

(ಬಿ) ಬಿ ವಲಯಗಳಲ್ಲಿನ ಶಾಲೆಗಳಿಗೆ ಸೇವಾ ವೆಯಿಟೇಜ್‌ನ್ನು 1.5 ಪಾಯಿಂಟ್‌ಗಳೊಂದಿಗೆ ಆ ವಲಯದಲ್ಲಿ ಸಲ್ಲಿಸಲಾದ/ ಪೂರ್ಣಗೊಳಿಸಿದ ಸೇವಾ ವರ್ಷಗಳ ಸಂಖ್ಯೆಯನ್ನು ಗುಣಿಸುವುದರ ಮೂಲಕ ಲೆಕ್ಕಹಾಕತಕ್ಕದ್ದು.

(ಸಿ) ಸಿ ವಲಯಗಳಲ್ಲಿನ ಶಾಲೆಗಳಿಗೆ ಸೇವಾ ವೆಯಿಟೇಜ್‌ನ್ನು 2.00 ಪಾಯಿಂಟ್‌ಗಳೊಂದಿಗೆ ಆ ವಲಯದಲ್ಲಿ ಸಲ್ಲಿಸಲಾದ/ ಪೂರ್ಣಗೊಳಿಸಿದ ಸೇವಾ ವರ್ಷಗಳ ಸಂಖ್ಯೆಯನ್ನು ಗುಣಿಸುವುದರ ಮೂಲಕ ಲೆಕ್ಕಹಾಕತಕ್ಕದ್ದು."

**(iii)** 3ನೇ ಉಪ ನಿಯಮದಲ್ಲಿನ ಟಿಪ್ಪಣಿಯಲ್ಲಿ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

**6. ನಿಯಮ 8 ರ ತಿದ್ದುಪಡಿ:- ಸದರಿ ನಿಯಮಗಳ 8ನೇ ನಿಯಮದಲ್ಲಿ,-**

**(i) (4) ನೇ ಉಪ ನಿಯಮಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-**

"(4) 6ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಂತರ್‌ಘಟಕ ವರ್ಗಾವಣೆಯನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ 16-ಎ ರ ನಿಯಮ ಮತ್ತು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957 ರ 6ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಪರಿಗಣಿಸಬೇಕು."

**(ii) (13) ನೇ ಉಪ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-**

"(13) ಪರಸ್ಪರ ವರ್ಗಾವಣೆಗಳ ಪ್ರಕರಣಗಳು, ತೀವ್ರತರ ಕಾಯಿಲೆಯ ಪ್ರಕರಣಗಳು, ಅಂಗವಿಕಲ ಪ್ರಕರಣಗಳು, ವಿಧವಾ ಶಿಕ್ಷಕಿಯರ ಪ್ರಕರಣಗಳು, ಸೈನಿಕರ ಪ್ರಕರಣಗಳು ಮತ್ತು ನೌಕರರ ಸಂಘಗಳಿಗೆ ಚುನಾಯಿತರಾದ ಪ್ರತಿನಿಧಿಗಳ ಪ್ರಕರಣಗಳ ವರ್ಗಾವಣೆ ಸಂಖ್ಯೆಯನ್ನು ಹೊರತುಪಡಿಸಿ, ಒಟ್ಟು ಕೋರಿಕೆ ಮೇರೆಗಿನ ಮತ್ತು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗಳ ಸಂಖ್ಯೆ ಶೇ 5 ಮತ್ತು ಅಂತರ ಘಟಕ ವರ್ಗಾವಣೆಗಳ ಸಂಖ್ಯೆ ಶೇ 1 ನ್ನು ಮೀರಬಾರದು."

**7. ನಿಯಮ 10 ರ ತಿದ್ದುಪಡಿ:-** ಸದರಿ ನಿಯಮಗಳ 10ನೇ ನಿಯಮದ (3) ನೇ ಉಪ ನಿಯಮದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4) ಒಂದೇ ಕ್ಲಸ್ಟರ್ (ಸಮೂಹ) ವ್ಯಾಪ್ತಿಯಲ್ಲಿ ಪರಸ್ಪರ ವರ್ಗಾವಣೆ ಪ್ರಕರಣಗಳನ್ನು ಪರಿಗಣಿಸತಕ್ಕದ್ದಲ್ಲ."

**8. ನಿಯಮ 16 ರ ತಿದ್ದುಪಡಿ:–** ಸದರಿ ನಿಯಮಗಳ 16 ನೇ ನಿಯಮದಲ್ಲಿ,

(i) ಉಪ ನಿಯಮ (1)ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"(1) ಜೇಷ್ಠತಾ ಘಟಕಗಳ ಹೊರಗಿನ ವರ್ಗಾವಣೆಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರ 6ನೇ ಪ್ರಕರಣದ (1) ಮತ್ತು (2) ನೇ ಉಪ ಪ್ರಕರಣಗಳಲ್ಲಿ ಒಳಗೊಂಡ ಸೂಕ್ತ ಉಪಬಂಧಗಳನ್ನು ಅನುಸರಿಸತಕ್ಕದ್ದು."

(ii) (5) ನೇ ಉಪ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(5) ಅಂತರ ಘಟಕ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಎ, ಬಿ ಮತ್ತು ಸಿ ವಲಯಗಳ ಖಾಲಿ ಸ್ಥಾನದ ಹುದ್ದೆಗೆ ಮಾಡತಕ್ಕದ್ದು"

**9. 18 ನೇ ನಿಯಮದ ತಿದ್ದುಪಡಿ:–** ಸದರಿ ನಿಯಮಗಳ 18 ನೇ ನಿಯಮದಲ್ಲಿ,–

(i) ಉಪ ನಿಯಮ (ಸಿ) ಯ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಡಿ) ಮೂರು ವರ್ಷ ಒಂದೇ ಕಛೇರಿಯಲ್ಲಿ ಪೂರ್ಣಗೊಳಿಸಿದ ಈ ಕೆಳಕಂಡ ಹುದ್ದೆಗಳಲ್ಲಿನ ಅಧಿಕಾರಿ/ಶಿಕ್ಷಕರನ್ನು ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆಯನ್ನು ಸರ್ಕಾರದ ಅನುಮೋದನೆಯೊಂದಿಗೆ ಮಾಡಬಹುದು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬಹುದು.

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಮತ್ತು ಇತರೆ ಕಛೇರಿಯಲ್ಲಿನ ವಿಷಯ ಪರಿವೀಕ್ಷಕರು,
2. ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಕಛೇರಿಯಲ್ಲಿನ ಸಹಾಯಕ ನಿರ್ದೇಶಕರು (ಬೋಧಕ ವೃಂದ)/ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ವೃಂದದ ಶಾಖಾಧಿಕಾರಿಗಳು
3. ಡಯಟ್/ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿರುವ ಉಪನ್ಯಾಸಕರು
4. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿನ ಶಿಕ್ಷಣ ಸಂಯೋಜಕರು
5. ವಿವಿಧ ಕಛೇರಿಯಲ್ಲಿನ ತಾಂತ್ರಿಕ ಸಹಾಯಕರು
6. ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿನ ಎಲ್ಲಾ ತೆರನಾದ ಹುದ್ದೆಗಳು (ಬಿ.ಆರ್.ಸಿ./ಬಿಆರ್.ಪಿ./ಸಿ.ಆರ್.ಪಿ./ ಎ.ಪಿ.ಸಿ/ಸಹಾಯಕ ನಿರ್ದೇಶಕರು ಎಂ.ಎಂ.ಎಸ್, ಹಾಗು ಇತರ ಹುದ್ದೆಗಳು)."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಂ. ಪ್ರಭುಸ್ವಾಮಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ)

## EDUCATION SECRETARIAT

## NOTIFICATION

**No. ED 37 ETR 2009, Bangalore, Dated: 30th MARCH 2011**

The draft of the following rules further to amend the Karnataka State Civil Services (Regulation of Transfer of Teachers) Rules, 2007, which the Government of Karnataka proposes to make in exercise of the powers conferred by sub-section (1) of section 13 of the Karnataka State Civil Services (Regulation of Transfer of Teachers) Act, 2007 (Karnataka Act 29 of 2007) is hereby published as required by sub section (1) of section 13 of the said Act for the information of all the persons likely to be affected thereby and notice is hereby given that the said draft will be taken into consideration after fifteen days from the date of its publication in the Official Gazette.

Any objections or suggestions which may be received by the State Government from any person with respect to said draft before the expiry of the period specified above will be considered for examination by the State Government. Objections and suggestions may be addressed to the Secretary to Government, Primary and Secondary Education, Education Department, M.S. Building, Bangalore-560001.

## DRAFT RULES

**1. Title and Commencement.-** (1) These rules may be called the Karnataka State Civil Services (Regulation of Transfer of Teachers) (Amendment) Rules, 2011.

(2) They shall come into force from the date of their publication in the Official Gazette.

**2. Amendment of rule 3.-** In the Karnataka State Civil Services (Regulation of Transfer of Teachers) Rules, 2007 (hereinafter referred to as the said rules), in rule 3, for the Table, the following shall be substituted, namely:-

**TABLE**

| **Sl. No. (1)** | **School (2)** | **Competent Authorities (3)** |
|---|---|---|
| (i) | Primary Schools | Deputy Director of Public Instruction (Administration) of the concerned Educational district |
| (ii) | Secondary Schools:-<br>(a) for Secondary School teachers | (a)Bangalore Division :-Joint Director-1, Office of the Commissioner for Public Instruction, Bangalore<br>(b) Mysore Division :- Secretary & Ex-officio Joint Director of Public Instruction, Mysore<br>(c) Belgaum Division :- Joint Director, Office of the Additional Commissioner for Public Instruction, Dharwad<br>(d) Gulbarga Division :- Joint Director, Office of the Additional Commissioner for Public Instruction, Gulbarga |
| | (b) for Secondary School Head Masters and equivalent cadre<br>(c)Physical Education Inspectors<br>(d)Vocational Educational Inspectors | 1. Commissioner for Public Instruction, Bangalore<br>2. Additional Commissioner for Public Instruction, Dharwad<br>3. Additional Commissioner for Public Instruction, Gulbarga |
| | (iii) Pre-university College | Commissioner or Director of Pre-university Education Department |

**3. Amendment of rule 4.-** In rule 4 of the said rules, in sub-rule (1), clause (iii) shall be omitted.

**4. Amendment of rule 6.-** In rule 6 of the said rules, for sub-rule (2), the following shall be substituted; namely:-

"(2) Teachers and officers belonging to teaching cadre of Department of Public Instruction and lecturers of Pre-University Education, shall fill in the application ON-LINE and submit through in the designated website of the Department of Public Instruction or Pre-university Education as the case may be"

(ii) after sub-rule (4), the following shall be inserted, namely:-

"(5) Applicants who have got relieved under rule 15, shall not be eligible for counselling under rule 11, for transfer, further period of three years."

**5. Amendment of rule 7.-** In rule 7 of the said rules,-

(i) in sub-rule (1) after clause (c), the following new clause shall be inserted, namely:-

"(cc) Spouses of working/deceased/retired/permanently disabled soldiers of Indian Defence Force/Para Military (soldiers whatever name called by the Home Ministry of the Central Government).

Exception : For the purpose of this 'clause' Cases of those applicants whose probation period is not declared satisfactorily shall not be eligible to be considered."

(ii) for sub-rule (2), the following shall be substituted, namely :-

"(2) Within each of the above priority categories the priority list shall be prepared by multiplying the number of years of service rendered by the applicant in the cadre in which he is serving in the places classified as A, B and C Zones as notified by the Government with weightage points given to the respective zones to get their total weighted service as follows :-

(a) weightage of service for schools in A zones shall be calculated by multiplying completed number of years of service in that zone with 1.00 points;

(b) weightage of service for schools in B zones shall be calculated by multiplying completed number of years of service in that zone with 1.5 points;

(c) weightage of service for schools in C zones shall be calculated by multiplying completed number of years of service in that zone with 2.00 points;"

(iii) in sub-rule (3) in the note, clause (c) shall be omitted.

**6. Amendment of rule 8.-** In rule 8 of the said rules,-

(i) for sub-rule (4), the following shall be substituted, namely:-

"(4) Subject to provisions of section 6, inter Unit Transfers have to be considered as specified in rule 16-A of the Karnataka Civil Services (General Recruitment) Rules, 1977 and rule 6 of the Karnataka Government Servants (Seniority) Rules, 1957."

(ii) for sub-rule (13), the following shall be substituted, namely:-

"(13) The total number of transfers on request excluding transfer cases of mutual transfers, terminally ill, physically handicapped teachers, widow teachers cases, soldiers and cases of transfer of elected representatives to recognized State Government Employees Associations, shall not exceed 5% and the total number of transfers out side the unit of seniority shall not exceed 1% of the total cadre strength of the unit."

**7. Amendment of rule 10.-** In rule 10 of the said rules, after sub-rule (3) the following shall be inserted, namely:-

"(4) Mutual transfer cases in same cluster shall not be considered."

**8. Amendment of rule 16.-** In rule 16 of the said rules,-

(i) for sub-rule (1), the following shall be substituted, namely :-

"(1) As regards transfers relating to outside the units of seniority, the relevant provision contained in Sub-Section (1) and (2) of section 6 of the Karnataka State Civil Services (Regulation of Transfer of Teachers) Act, 2007 shall be followed. "

(ii) for sub-rule (5), the following shall be substituted, namely:-

"(5) The transfers out of the unit shall be done to the availability of the vacant posts in A, B or C Zone. "

**9. Amendment of rule 18.-** In rule 18 of the said rules,-

(i) after item (c), the following shall be inserted, namely:-

"(d) Officers/Teachers working in the following posts, who have completed three years of service in the same office, may be transferred and vacancies in the posts may be filled in public interest with the approval of the Government, namely:-

(1) Subject Inspectors in the office of the Deputy Director of Public Instruction and in other offices;

(2) Asst Directors(Teaching Cadre) of Public Instruction in different Offices/ Section Officers (Lecturer's Cadre) in PU Department.

(3) Lecturers in DIET/Teachers Training Institutes.

(4) Educational Co-ordinators in the office of Block Education Officers.

(5) Technical Assistants in different offices

(6) All types of posts in the Centrally Sponsored Schemes (BRC/BRP/CRP/APC/Asst Directors, MMS and other posts)".

By order and in the name of the Governor of Karnataka,

**M. PRABHUSWAMY**
Under Secretary to Government,
Education Department (Primary).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (1000 ಪ್ರತಿಗಳು)